ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 24.01.2024

**ಪಾಟೀ ಸವಾಲು : 4 ರಿಂದ 7 ನೇ ಪ್ರತಿವಾದಿ ಪರ ಶ್ರೀ ಎಫ್. ಎಂ. ಎಂ.ವಕೀಲರಿಂದಃ**

1) ನಾನು ಶಾಲೆ ಕಲಿತಿರುವುದಿಲ್ಲ. ನಾನು 1 ನೇ ಪ್ರತಿವಾದಿಯ ಮಗಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಹರಿಹರ ತಾಲೂಕು ಪತ್ಯಾಪುರ ಗ್ರಾಮದಲ್ಲಿ 12 ವರ್ಷದಿಂದ ವಾಸವಾಗಿರುತ್ತಾನೆ. ನನ್ನ ತಾಯಿ ಅನಾರೋಗ್ಯದಿಂದ ಮರಣ ಹೊಂದಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಾಯಿ ಯಾವ ದಿನಾಂಕ, ತಿಂಗಳು, ವರ್ಷದಲ್ಲಿ ಮರಣ ಹೊಂದಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಅನಾರೋಗ್ಯದಿಂದ ಮರಣ ಹೊಂದಿರುತ್ತಾಳೆ ಎಂದರೆ ಸರಿ. ನನ್ನ ತಾಯಿ ಮರಣ ಹೊಂದಿದಾಗ ನನಗೆ 11 ವರ್ಷ ವಯಸ್ಸು ಆಗಿತ್ತು. ನನ್ನ ತಾಯಿ ಪಾರ್ಶ್ವ ವಾಯು ರೋಗದಿಂದ ಬಳಲುತ್ತಿದ್ದಳು ಎಂದರೆ ಸರಿ. ಆದ್ದರಿಂದ ನನ್ನ ತಂದೆ ಅವಳನ್ನು ದವಾಖಾನೆಗೆ ತೋರಿಸುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾವು ಕೂಲಿ ನಾಲಿ ಮಾಡಿ ತೋರಿಸಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು 11 ವರ್ಷ ವಯಸ್ಸಿನವಳು ಇದದ್ದರಿಂದ ಕೂಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ನನ್ನ ತಾಯಿಯನ್ನು ದವಾಖಾನೆಗೆ ತೋರಿಸಿದ ಬಗ್ಗೆ ದಾವೆಯಲ್ಲಿ ಬರೆಸಿರುವುದಿಲ್ಲ. ನಾನು ಸಲ್ಲಿಸಿದ ಪ್ರಮಾಣ ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಾವಾ ಶೆಡ್ಯೂಲ್ **ಅ ಮತ್ತು ಬ** ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ, ದಾವಾ ಆಸ್ತಿ 1 ಎಕರೆ 22 ಗುಂಟೆ ಇದೆ. ದಾವಾ ಆಸ್ತಿ 2004 ಕ್ಕಿಂತ ಪೂರ್ವದಲ್ಲಿ ಪೋಡಿ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ದಾವಾ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ. ದಾವಾ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಶಿಡೇನೂರು ವಕೀಲರು ದಾವೆ ಬರೆದಿರುತ್ತಾರೆ. ವಂಶಾವಳಿ ಎಂದರೆ ನನಗೆ ಗೊತ್ತಿಲ್ಲ. ಮರಿಯಪ್ಪ ನನ್ನ ಅಜ್ಜ ಇರುತ್ತಾರೆ. ಮರಿಯಪ್ಪನ ಹೆಂಡತಿ ಹೆಸರು ಬಾಲವ್ವ ಮತ್ತು ಕೆಂಚವ್ವ ಅಂತಾ ಇದೆ. ಬಾಲವ್ವಳಿಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಶೆಡ್ಯೂಲದಲ್ಲಿ ಮರಿಯಪ್ಪನ ಹೆಂಡತಿ ಹೆಸರು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮರಿಯಪ್ಪ ಮತ್ತು ಬಾಲವ್ವ ಇವರನ್ನು ನೋಡಿಲ್ಲ ಎಂದರೆ ಸರಿ.

2) ಫಕ್ಕೀರಪ್ಪ ಬಾಲಕ್ಕನವರ ಮತ್ತು ಪ್ರತಿವಾದಿಯರಿಗೂ ವೈಯಕ್ತಿಕವಾಗಿ ದ್ವೇಷ ಇತ್ತು ಎಂದರೆ ಸರಿಯಲ್ಲ. ಫಕ್ಕೀರಪ್ಪ ಬಾಲಕ್ಕನವರ ಇವರು ಕಾಂಗ್ರೆಸ್ ಮುಖಂಡರು ಎಂದರೆ ನನಗೆ ಗೊತ್ತಿಲ್ಲ. ಮಹಾಲಿಂಗಪ್ಪ ಇವರು ಬಿಜೆಪಿ ಮುಖ್ಯಸ್ಥ ಎಂದರೆ ಸರಿ. ಈ ಮೇಲಿನವರ ಮಧ್ಯ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯ ಇದೆ ಎಂದರೆ ನನಗೆ ಗೊತ್ತಿಲ್ಲ. ಮಹಾಲಿಂಗಪ್ಪ ಇವರು ಸರ್ಕಾರಿ ಜಮೀನನ್ನು ಕೊಡಬಾರದು ಎಂದು ತಕರಾರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಫಕ್ಕೀರಪ್ಪ ಇವರು ಸರ್ಕಾರದ ಜಮೀನು ಬರಬೇಕು ಎಂದು ಹೋರಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ.

ಆದ್ದರಿಂದ 4 ರಿಂದ 7 ನೇ ಪ್ರತಿವಾದಿಯರ ಮಧ್ಯ ದ್ವೇಷ ಇತ್ತು ಎಂದರೆ ನನಗೆ ಗೊತ್ತಿಲ್ಲ. ಫಕ್ಕೀರಪ್ಪ ಬಾಲಕ್ಕನವರ ಇವನು ಈ ದಾವೆಯ ಎಲ್ಲ ದಾಖಲೆಗಳನ್ನು ತೆಗೆದು ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಕೀಲರಿಗೆ ಬೇಟಿಯಾಗಿಲ್ಲ ಮತ್ತು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.